ಆ. ನಿಯಮ ರೀತ್ಯ ಸೀಮೆಎಣ್ಣೆ ಹಂಚುವ ಬಗ್ಗೆಯಲ್ಲಿ ಪರಿಣಾಮಕಾರಿ ತನಿಖೆ ಮಾಡಲಾಗುತ್ತಿದೆಯೇ;

ಇ. ಈ ದಿಸೆಯಲ್ಲಿ ನಿಯಮಗಳನ್ನು ಪಾಲನೆ ಮಾಡಿದೆಯೇ ಎಂಬುದನ್ನು ಪರಿಶೀಲಿಸಲು ಮೈಸೂರು ನಗರದಲ್ಲಿ ಪರಿವೀಕ್ಷಣಾ ಸಮಿತಿಗಳನ್ನು ಸರ್ಕಾರವು ರಚಿಸುವುದೇ;

ಈ. ಸರ್ಕಾರವು ಸ್ವಲ್ಪ ಪ್ರಮಾಣದ ಸೀಮೆಎಣ್ಣೆಯನ್ನು ಕಡಿಮೆ ದರದಲ್ಲಿ ಹಾಗೂ ಸ್ವಲ್ಪ ಪ್ರಮಾಣದ ಸೀಮೆಎಣ್ಣೆ ಹೆಚ್ಚಿನ ದರದಲ್ಲಿ ಉರುವಲುಗಾಗಿ ಮಾರಾಟ ಮಾಡಲು ಸೂಕ್ತ ಕ್ರಮ ಕೈಗೊಳ್ಳುವುದೇ ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ. ಪಟ್ಟಿಗಳ ಪ್ರತಿಗಳನ್ನು ಸದನದ ಮೇಜಿನ ಮೇಲೆ ಇಡಲಾಗಿದೆ.

ಆ. ಹೌದು.

ಇ. ಸೀಮೆಎಣ್ಣೆಯು ಸೇರಿದಂತೆ ಪಡಿತರ ವಸ್ತುವನ್ನು ನ್ಯಾಯಬೆಲೆ ಅಂಗಡಿಗಳ ಮುಖಾಂತರ ಪರಿಣಾಮಕಾರಿಯಾಗಿ ವಿತರಿಸಲು ಪ್ರತಿ ನ್ಯಾಯಬೆಲೆ ಅಂಗಡಿಗೆ ಒಂದರಂತೆ ಮೈಸೂರು ನಗರದಲ್ಲಿ ಜಾಗೃತ ಸಮಿತಿಗಳನ್ನು ರಚಿಸಲಾಗಿದೆ.

ಈ. ಸೀಮೆಎಣ್ಣೆಯನ್ನು ಗೃಹ ಬಳಕೆ ಉದ್ದೇಶಕ್ಕಾಗಿ ಕಾರ್ಡುದಾರರಿಗೆ ಲೀಟರ್ ಒಂದಕ್ಕೆ ರೂ. 2.81 ರಂತೆ ಹಾಗೂ ಕೈಗಾರಿಕೆ ಉದ್ದೇಶಕ್ಕಾಗಿ ಲೀಟರ್ ಒಂದಕ್ಕೆ ರೂ.6.18 ರಂತೆ ನೀಡಲಾಗುತ್ತಿದೆ.

ಸರ್ಕಾರಿ ನೌಕರನ ವರ್ಗಾವಣೆಗೆ ನೀಡಿದ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ಇತ್ಯಾದಿಗಳ ಮೊತ್ತ

1288 (1398): ಶ್ರೀ ಕೆ. ಸಿದ್ದಯ್ಯ (ಸಂತೇಮಾರನ ಹಳ್ಳಿ):–

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ. ಸರ್ಕಾರಿ ನೌಕರರಿಗೆ 1990–91 ಹಾಗೂ 1991–92 ರಲ್ಲಿ ಕೊಡಲಾದ ಒಟ್ಟು ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ ಹಾಗೂ ಇತರೆ ಭತ್ಯಗಳು ಇದ್ದಲ್ಲಿ ಇವುಗಳ ಮೊತ್ತ (ಪ್ರತ್ಯೇಕ ಮಾಹಿತಿ ನೀಡುವುದು);

ಬಿ. ಸರ್ಕಾರಿ ನೌಕರನ ವರ್ಗಾವಣೆ ಸಂದರ್ಭದಲ್ಲಿ ಅವನ ಕುಟುಂಬದ ಎಷ್ಟು ಸದಸ್ಯರಿಗೆ ಪ್ರಯಾಣಭತ್ಯೆ ಮತ್ತು ದಿನಭತ್ಯೆ ಇತ್ಯಾದಿಗಳನ್ನು ನೀಡಲಾಗುತ್ತಿದೆ;

ಸಿ. ಒಂದೇ ಕುಟುಂಬದ ಸರ್ಕಾರಿ ನೌಕರರಾದ ಗಂಡ – ಹೆಂಡತಿ, ಒಂದೇ ಮನೆಯಲ್ಲಿ ವಾಸವಾಗಿದ್ದರೆ ಮನೆ ಬಾಡಿಗೆ ಭತ್ಯೆಯನ್ನು ಪಡೆಯುತ್ತಾರೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಎ.

ವರ್ಷ	ಪ್ರಯಾಣ ಭತ್ಯೆ ಹಾಗೂ ದಿನಭತ್ಯೆ	ಇತರೆ ಭತ್ಯೆಗಳು
		ಲಕ್ಷ ರೂ.ಗಳಲ್ಲಿ
1990–91 (ಲೆಕ್ಕ)	2285.43	5552.99
1991–92 (ಪರಿಷ್ಕೃತ) (ಅಂದಾಜು)	2105.66	6966.23

ಬಿ. ಸರ್ಕಾರಿ ನೌಕರ, ಸರ್ಕಾರಿ ನೌಕರಸ್ತನ ಹೆಂಡತಿ (ಅಥವಾ ಗಂಡ); ಮಲಮಕ್ಕಳನ್ನೊಳಗೊಂಡಂತೆ ಸ್ವಂತ ಮಕ್ಕಳು: ಅವನೊಂದಿಗೆ ವಾಸಿಸುವ ಮತ್ತು ಅವನ ಮೇಲೆ ಅವಲಂಬಿತರಾದ ತಂದೆ, ತಾಯಿ, ವರ್ಗಾವಣೆಯಾದ ಸ್ಥಳಕ್ಕೆ ಪ್ರಯಾಣ ಮಾಡಿದರೆ ಮಾತ್ರ ವರ್ಗಾವಣೆ ಪ್ರಯಾಣಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ. ಆದರೆ ಈ ಭತ್ಯೆ ಪಡೆಯಲು ವರ್ಗಾವಣೆ ಸಾರ್ವಜನಿಕ ಹಿತಾಸಕ್ತಿಯಿಂದಾಗಿರಬೇಕು. ಇಂಥ ವರ್ಗಾವಣೆಯಾದಾಗ ಸರ್ಕಾರಿ ನೌಕರನಿಗೆ ಅಥವಾ ನೌಕರನ ಕುಟುಂಬದ ಸದಸ್ಯರಿಗೆ ದಿನಭತ್ಯೆಯನ್ನು ಕೊಡುವುದಿಲ್ಲ.

ಸಿ. ಸರ್ಕಾರಿ ಆದೇಶ ಸಂ.ಎಫ್‌ಡಿ 67 ಎಸ್‌ಆರ್‌ಪಿ 89 ದಿನಾಂಕ 4-5-90ರ ಕಂಡಿಕೆ ಸಂಖ್ಯೆ 3.4ರ ಮೇರೆಗೆ ಒಬ್ಬ ಸರ್ಕಾರಿ ನೌಕರನು\ಳು ತಿಂಗಳಿಗೆ ರೂ.2525 ಅಥವಾ ಅದಕ್ಕಿಂತ ಹೆಚ್ಚು ಮೂಲ ವೇತನ ಪಡೆಯುತ್ತಿದ್ದು, ಅವನ\ಳ ಪತ್ನಿ:ಗಂಡ, ರಾಜ್ಯ ಸರ್ಕಾರ\ಕೇಂದ್ರ ಸರ್ಕಾರ\ಕೇಂದ್ರ ಅಥವಾ ರಾಜ್ಯಸಾರ್ವಜನಿಕ ಉದ್ಯಮಗಳು\ಸ್ಥಳೀಯ ಸಂಸ್ಥೆಗಳು\ಅರೆ ಸರ್ಕಾರಿ ಸಂಸ್ಥೆಗಳು\ಅನುದಾನ ಪಡೆಯುತ್ತಿರುವ ಸಂಸ್ಥೆಗಳು\ಸಹಕಾರ ಸಂಘಗಳ ನೌಕರನಾಗಿದ್ದು ತಿಂಗಳಿಗೆ ರೂ.2525 ಅಥವಾ ಅದಕ್ಕಿಂತ ಹೆಚ್ಚು ಮೂಲ ವೇತನ ಪಡೆಯುತ್ತಿರುವ ಸಂದರ್ಭದಲ್ಲಿ ಅವರಲ್ಲೊಬ್ಬರಿಗೆ ಕೊಡಬಹುದಾದಷ್ಟು ಮನೆ ಬಾಡಿಗೆ ಭತ್ಯೆಯನ್ನು ತಿಂಗಳಿಗೆ ರೂ.2525 ಮೂಲವೇತನದ ಮೇಲೆ ದೊರೆಯಬಹುದಾದಷ್ಟು ಮೊತ್ತಕ್ಕೆ ಪರಿಮಿತಿಗೊಳಿಸತಕ್ಕದ್ದು. ದಂಪತಿಗಳಲ್ಲಿ ಇನ್ನೊಬ್ಬರು ಗೊತ್ತುಪಡಿಸಲಾದ ದರಗಳಲ್ಲಿ ಮನೆ ಬಾಡಿಗೆ ಭತ್ಯೆಯನ್ನು ಪಡೆಯಲು ಅರ್ಹರಾಗಿರತಕ್ಕದ್ದು.

ರಾಜ್ಯದಲ್ಲಿನ ಎಲ್ಲಾ ತರಹೆಯ ಹೋಟೆಲುಗಳಲ್ಲಿ ತಿಂಡಿ ಪದಾರ್ಥಗಳ ಬೆಲೆಗಳ ಏರಿಕೆ

1289 (2045): ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ):-

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿನ ಎಲ್ಲಾ ತರಹೆಯ ಹೋಟೆಲುಗಳಲ್ಲಿ ತಿಂಡಿ ಪದಾರ್ಥಗಳ ಬೆಲೆಗಳು ಅಸಾಧಾರಣವಾಗಿ ಏರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ತಿಂಡಿ ಪದಾರ್ಥಗಳ ಬೆಲೆಯನ್ನು ನಿಗದಿಪಡಿಸಲು ಈ ಹೋಟೆಲುಗಳ ಮೇಲೆ ಸರ್ಕಾರ ನಿಯಂತ್ರಣ ಇಟ್ಟುಕೊಂಡಿದೆಯೇ;

ಇ. ಬೇರೆ ರಾಜ್ಯಗಳಲ್ಲಿ ಅಂದರೆ ತಮಿಳುನಾಡಿನಲ್ಲಿರುವಂತೆ ರಾಜ್ಯದ ಎಲ್ಲಾ ತರಹೆಯ ಹೋಟೆಲುಗಳ ತಿಂಡಿ ಪದಾರ್ಥಗಳ ಬೆಲೆಗಳನ್ನು ನೀಗದಿಪಡಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-

ಅ. ನಮ್ಮ ರಾಜ್ಯದ ಹೋಟೆಲುಗಳಲ್ಲಿ ತಿಂಡಿ ಪದಾರ್ಥಗಳ ಬೆಲೆ ಏರಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ. ಇಲ್ಲ. ಹೋಟೆಲುಗಳು ಲಾಭ ಹಾಗೂ ನಷ್ಟದ ಆಧಾರದ ಮೇಲೆ ಕಾರ್ಯನಿರ್ವಹಿಸುವುದರಿಂದ ಇವುಗಳನ್ನು ಕೈಗಾರಿಕೆಗಳಾಗಿ ಪರಿಗಣಿಸಿದೆ. ಸರ್ಕಾರದಿಂದ ಯಾವುದೇ ತರಹೆಯ ಆಹಾರ ಪದಾರ್ಥಗಳನ್ನು ಹೋಟೆಲುಗಳಿಗೆ ಒದಗಿಸುತ್ತಿಲ್ಲ.